ವಿಜಯವಾಣಿ
ಕನ್ನಡಿಗರ ಧ್ವನಿ

# ಜೈನ್ ವಿವಿ 169 ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್

## ಸ್ಕೂಲ್ ಆಫ್ ಕಾಮರ್ಸ್‌ನಲ್ಲಿ ಶಿಷ್ಯವೇತನ ವಿತರಣೆ » 50 ಲಕ್ಷ ರೂ. ಹಂಚಿಕೆ

ಬೆಂಗಳೂರು: ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಪ್ರೋತ್ಸಾಹಿಸಲು ಜೈನ್ ಯೂನಿವರ್ಸಿಟಿ 169 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಿಷ್ಯವೇತನ ವಿತರಿಸಿದೆ. ಜೈನ್ ವಿವಿಯ ಸ್ಕೂಲ್ ಆಫ್ ಕಾಮರ್ಸ್ ಸ್ಟಡೀಸ್‌ನಲ್ಲಿ ವಾರ್ಷಿಕ ವಿದ್ಯಾರ್ಥಿ ವೇತನ ವಿತರಣೆ ಸಮಾರಂಭ ಆಯೋಜಿಸಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಕುಲಪತಿ ಡಾ. ಎನ್. ಸುಂದರರಾಜನ್, ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ 50 ಲಕ್ಷ ರೂ. ಮೊತ್ತದ ವಿದ್ಯಾರ್ಥಿವೇತನ ವಿತರಣೆ ಮಾಡಲಾಗುತ್ತಿದೆ. ಜೈನ್ ವಿವಿ ಮಾನ್ಯತೆ ಹೊಂದಿರುವ ವಿಶ್ವವಿದ್ಯಾನಿಲಯವಾಗಿ ಗುರುತಿಸಿಕೊಂಡಾಗಿನಿಂದ ಈವರೆಗೆ 4.5 ಕೋಟಿ ರೂ. ವಿದ್ಯಾರ್ಥಿವೇತನಗಳನ್ನು ವಿತರಿಸಿದೆ ಎಂದರು.

ವಿದ್ಯಾರ್ಥಿವೇತನದ ಮೊತ್ತ ಮುಖ್ಯವಲ್ಲ. ಇದು ಈ ವರ್ಷ ನೀವು ಪಟ್ಟ ಪರಿಶ್ರಮಕ್ಕೆ ದೊರೆತಿರುವ ಗುರುತಾಗಿದೆ. ನಾನು ವಿದ್ಯಾರ್ಥಿಯಾಗಿದ್ದಾಗ, ನನ್ನ ಶಿಕ್ಷಣಕ್ಕೆ ನನ್ನ ಪಾಲಕರಿಂದ ಒಂದು ಪೈಸೆಯನ್ನೂ ತೆಗೆದುಕೊಂಡಿರಲಿಲ್ಲ. ಏಕೆಂದರೆ ನಾನು ಸದಾ ವಿದ್ಯಾರ್ಥಿವೇತನ ಪಡೆಯುತ್ತಿದ್ದೆ. ಆದ್ದರಿಂದ ಓರ್ವ ವಿದ್ಯಾರ್ಥಿಯ ಜೀವನದಲ್ಲಿ ವಿದ್ಯಾರ್ಥಿವೇತನದ ಮೌಲ್ಯವೇನು ಹಾಗೂ ಇದರಿಂದ ವಿದ್ಯಾರ್ಥಿಗೆ ದೊರೆಯುವ ಪ್ರೋತ್ಸಾಹ ಎಂಥದ್ದು ಎಂಬುದು ನನಗೆ ತಿಳಿದಿದೆ ಎಂದರು.

ವಿವಿಯ ಮೊದಲ ವರ್ಷದ ಬಿಕಾಂ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿವೇತನ ಪಡೆದ ಟಿ.ಎಂ.ಹರ್ಷವರ್ಧನ್ ಮಾತನಾಡಿ, ಇದು ಮತ್ತಷ್ಟು ಶೈಕ್ಷಣಿಕ ಪ್ರಗತಿ ಸಾಧಿಸಲು ನೀಡಿದ ಉತ್ತಮ ಪ್ರೋತ್ಸಾಹವಾಗಿದೆ. ಇದು ನನಗೆ ಅತ್ಯಂತ ಅಮೂಲ್ಯ ಎಂದರು. ಮೊದಲ ವರ್ಷದ ಬಿಕಾಂ ಓದುತ್ತಿರುವ ವಿದ್ಯಾರ್ಥಿನಿ ಡಿಂಪಲ್ ಕುಮಾರಿ ಮಾತನಾಡಿ, ವಿದ್ಯಾರ್ಥಿವೇತನ ಪಡೆಯುವುದು ಬಹಳ ಪ್ರೋತ್ಸಾಹದಾಯಕ ಉಪಕ್ರಮ. ನಾನು ಈ ಮೊತ್ತವನ್ನು ಭವಿಷ್ಯದಲ್ಲಿ ನನಗೆ ಉಪಯುಕ್ತವಾಗುವಂಥ ಹೆಚ್ಚಿನ ಕೋರ್ಸ್‌ಗಳನ್ನು ಕೈಗೊಳ್ಳಲು ಬಳಸಿಕೊಳ್ಳಲು ಬಯಸಿದ್ದೇನೆ. ಜತೆಗೆ ಈ ವಿದ್ಯಾರ್ಥಿವೇತನ ನನ್ನ ಉನ್ನತ ಶಿಕ್ಷಣದ ಆಸೆಗೆ ಪೂರಕವಾಗಿದೆ ಎಂದರು.



ಜೈನ್ ವಿವಿಯ ಸ್ಕೂಲ್ ಆಫ್ ಕಾಮರ್ಸ್ ಸ್ಟಡೀಸ್‌ನಲ್ಲಿ ನಡೆದ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ವಿತರಿಸಲಾಯಿತು.